ಈ) 20,000 ಫೋಟೋ ಪಡಿತರ ಚೀಟಿ ಹಾಗ 65,811 ಹಸಿರು ಚೀಟಿಗಳನ್ನು ಧಾರವಾಡ ಜಿಲ್ಲೆಗೆ ಹಂಚಿಕೆ ಮಾಡಲಾಗಿದೆ.

ಹುಬ್ಬಳ್ಳಿ - ಧಾರವಾಡ ಬೈಪಾಸ್ ರಸ್ತೆ ನಿರ್ಮಾಣ

162-ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ-ಧಾರವಾಡ ಹೊರವಲಯದಲ್ಲಿ ನಿರ್ಮಾಣವಾಗುತ್ತಿರುವ ಬೈಪಾಸ್ ರಸ್ತೆ ನಿರ್ಮಾಣ 1996 ಮಾರ್ಚ್ ಅಂತ್ಯದಲ್ಲಿ ಮುಕ್ತಾಯಗೊಳ್ಳುವುದೇ?

ಆ) ಮುಕ್ತಾಯಗೊಳ್ಳದೆ ಇದ್ದಲ್ಲಿ ಅದಕ್ಕೆ ಇರುವ ಅಡ್ಡಿ ಆತಂಕಗಳೇನು;

ಇ) ಹಾಗಿದ್ದಲ್ಲಿ ಅವುಗಳ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಇನ್ನು ಎಷ್ಟು ಸಮಯದಲ್ಲಿ ಈ ರಸ್ತೆ ನಿರ್ಮಾಣದ ಕೆಲಸ ಪೂರ್ಣಗೊಳ್ಳುವುದು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಈಗ ತೆಗೆದುಕೊಂಡಿರುವ ಹುಬ್ಬಳ್ಳಿ - ಧಾರವಾಡ ಬೈಪಾಸ್ ರಸ್ತೆಯ ಮೊದಲನೇ ಹಂತದ ಕೆಲಸದಲ್ಲಿ (ಅಂದರೆ ಹೆಬ್ಬುರಿನಿಂದ ಯಾರೆಕೊಪ್ಪದವರೆಗೆ) ಕಿ.ಮೀ. 29.993 ರಿಂದ ಕಿ.ಮೀ. 12.475ರ ವರೆಗೆ) ಡಾಂಬರೀಕರಣದ ಕಾಮಗಾರಿ ಹೊರತು ಪಡಿಸಿ, ಬಾಕಿ ಉಳಿದ ಕೆಲಸಗಳು ಅಂದರೆ ಡಬ್ಲ್ಯು.ಬಿ.ಎಂ. ಕಾಮಗಾರಿಯನ್ನು ಮಾರ್ಚ್ 1996 ಅಂತ್ಯದಲ್ಲಿ ಮುಕ್ತಾಯಗೊಳಿಸಿ ವಾಹನಗಳನ್ನು ಸದರಿ ರಸ್ತೆಯಲ್ಲಿ ಬಿಡಲಾಗುವುದು.

ಆ) ಭಾಗಶಃ ಗುತ್ತಿಗೆದಾರರು ಮಂದಗತಿಯಲ್ಲಿ ಕೆಲಸ ನಿರ್ವಹಿಸುತ್ತಿರುವುದು, ಧಾರವಾಡ ಸುತ್ತ ಮುತ್ತ ಜಿಲ್ಲೆಯ ಅಭಾವ.

ಇ) ಗುತ್ತಿಗೆದಾರರು ಕೆಲಸ ಚುರುಕುಗೊಳಿಸುವಂತೆ ತಿಳಿಸಿದ್ದು, ಅವರು ಜಿಲ್ಲಿ ಇತ್ಯಾದಿ ಸಂಗ್ರಹಿಸಿ ಕೆಲಸವನ್ನು ಮಾಡಿಸಲಾಗುತ್ತಿದೆ.

ಈ) ಡಬ್ಲ್ಯೂ.ಬಿ.ಎಂ. ಕೆಲಸವನ್ನು ಮಾರ್ಚ್ ಅಂತ್ಯಕ್ಕೆ ಮುಗಸಿ ಮೇ 1996ರ ರೊಳಗೆ ಡಾಂಬರೀಕರಣ ಮುಗಿಸಲಾಗುವುದು.

ಹುಬ್ಬಳ್ಳಿ ಗ್ರಾಮೀಣಾ ಪ್ರದೇಶದಲ್ಲಿ ಕುಡಿಯುವ ನೀರು ವಿಷಪೂರಿತವಾಗಿರುವುದು

154-ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದ ಕಿರೇಸೂರ, ಹೆಬ್ಬಸೂರ ಮತ್ತು ಸುಳ್ಳ ಗ್ರಾಮಗಳಲ್ಲಿ ಕುಡಿಯುವ ನೀರಿಗಾಗಿ ಉಪಯೋಗಿಸುವ ಕೆರೆಗಳ ನೀರು ವಿಷಪೂರಿತವಾಗಿದ್ದು ಕುಡಿಯಲು ಯೋಗ್ಯವಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪ.ರಾಜ್ ಸಚಿವರು) :

ಅ) ಕಿರೇಸೂರ ಮತ್ತು ಹೆಬ್ಬಸೂರ ಗ್ರಾಮಗಳಲ್ಲಿ ಕುಡಿಯುವ ನೀರು ಯೋಗ್ಯವಿಲ್ಲವೆಂಬ ದೂರು ಸರ್ಕಾರದ ಗಮನಕ್ಕೆ ಬಂದಿದೆ. ಸುಳ್ಳ ಗ್ರಾಮದಲ್ಲಿ ಕುಡಿಯುವ ನೀರಿನ ಯಾವುದೇ ಕೆರೆ ಇರುವುದಿಲ್ಲ.

ಆ) ಕಿರೇಸೂರ ಹಾಗೂ ಹೆಬ್ಬಸೂರ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೆರೆಗಳ ರಾಸಾಯನಿಕ ವಿಶ್ಲೇಷಣೆ ಮಾಡಿಸಲಾಗುತ್ತಿದ್ದು ವರದಿಯ ಫಲಿತಾಂಶಗಳಲ್ಲಿ ನೀರು ದೋಷಪೂರಿತವಾಗಿದ್ದು ಕಂಡುಬಂದಲ್ಲಿ ಗ್ರಾಮವಾಸಿಗಳಿಗೆ ಜಿಲ್ಲಾ ಆಡಳಿತ ಮತಿಯಿಂದ